ಅ) ಬಂದಿದೆ.

ಆ) ದಿನಾಂಕ 21-1-75ರ ಸರ್ಕಾರದ ಪ್ರೊಸಿಡಿಂಗ್ಸ್‌ನಲ್ಲಿ ತೀರ್ಮಾನಿಸಿದ ಪ್ರಕಾರ ರೂ. 5-00 ರಿಂದ 6-00 ಸೂಕ್ತವೆಂದು ಪರಿಗಣಿಸಿ ಒಂದು ಸೂಕ್ತ ಸೂಚನೆ ಬಂದಿದೆ. ಈ ವರೆಗೆ ಪ್ರತ್ಯೇಕ ಮೀಟರ್ ಇಲ್ಲದ್ದರಿಂದ ರೂ. 5-25 ಗಳೆಂದು ನಿಗದಿಪಡಿಸಲಾಗಿದೆ. ಇದರಂತೆ ಸರಾಸರಿ ರೂ. 5-25 ಗಳನ್ನು ಪ್ರತಿಯೊಬ್ಬ ನಿವಾಸಿಯ ವೇತನದಲ್ಲಿ ಮುರಿದು ಕೊಳ್ಳಲಾಗುತ್ತಿದೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯವರು ಈಗಿನ ಪರಿಷ್ಕೃತ ದರದಂತೆ ಒಂದು ಸಂಸಾರದ ಮನೆಗೆ ಒಂದು ತಿಂಗಳಿಗೆ ಕನಿಷ್ಟ ದರ 7-50 ಪೈ. ಎಂದು ಪ್ರಕಟಿಸಿರುತ್ತಾರೆ. ಅದಕ್ಕೆ ಹೋಲಿಸಿದರೆ ಮೇಲ್ಕಂಡ ದರವು ಕಡಿಮೆಯಾಗಿರುತ್ತದೆ.

ಇ) ಈ ವಸತಿ ಗೃಹಗಳು ಬಹು ಅಂತಸ್ತಿನ ಕಟ್ಟಡಗಳಾಗಿರುವುದರಿಂದ ಕೆಳ ಅಂತಸ್ತಿನ ಮನೆಗಳಿಗೆ ಮಾತ್ರ ನೀರು ಸರಬರಾಜಾಗಿ ಮೇಲಂತಸ್ತಿನ ಮನೆಗಳಿಗೆ ನೀರು ಸರಿಯಾಗಿ ಸರಬರಾಜು ಆಗುವುದಿಲ್ಲ. ಕಾರಣ ನೀರಿನ ಕೊಳವೆಯಲ್ಲಿ ಮೇಲಂತಸ್ತಿಗೆ ಹೋಗುವಷ್ಟು ಒತ್ತಡ ಇರುವುದಿಲ್ಲ. ಆದ್ದರಿಂದ ರಾಜಾಜಿನಗರದ ವಸತಿ ಗೃಹಗಳಿಗೆ ಕೊಳವೆ ಬಾವಿಗಳ ವ್ಯವಸ್ಥೆಯನ್ನು ಸಹ ಮಾಡಲಾಗಿದೆ ಕಾರಣ ಪ್ರತಿಯೊಂದು ಮನೆಗಳಿಗೂ ಪ್ರತ್ಯೇಕ ಮೀಟರ್‌ಗಳನ್ನು ಅಳವಡಿಸುವುದರಿಂದ ಪ್ರಯೋಜನವಾಗುವುದಿಲ್ಲ. ಮತ್ತು ಉಪಯೋಗವು ಆಗಲಾರದೆಂದು ಭಾವಿಸಲಾಗಿದೆ.

ಈ) ಅಗತ್ಯವಾದಷ್ಟು ಪ್ರಮಾಣದ ನೀರನ್ನೊದಗಿಸುವುದು ಬೆಂಗಳೂರು ಜಲಮಂಡಳಿಗೆ ಸೇರಿದ್ದು, ಆದಾಗ್ಯೂ ಸಹಾ ಈ ರೀತಿ ವ್ಯವಸ್ಥೆ ಇದೆ. ಬೆಂಗಳೂರು ನೀರು ಮತ್ತು ಸರಬರಾಜು ಮತ್ತು ಒಳಚರಂಡಿ ಮಂಡಲಿಯಿಂದ ಬಂದ ನೀರನ್ನು ಮತ್ತು ಕೊಳವೆ ಬಾವಿಗಳ ಮುಖಾಂತರ ಬಂದ ನೀರನ್ನು ನೆಲಮಟ್ಟದ ಶೇಖರಣಾ ತೊಟ್ಟಿಯಲ್ಲಿ ಶೇಖರಿಸಿ ಬಹು ಅಂತಸ್ತಿನ ಕಟ್ಟಡಗಳ ಮೇಲ್ಛಾವಣಿಯಲ್ಲಿರುವ ನೀರಿನ ತೊಟ್ಟಿಯಲ್ಲೇ ಶೇಖರಿಸಿ ನಂತರ ಪ್ರತಿಯೊಂದು ಮನೆಗೂ ಸಾಕಾಗುವಷ್ಟು ನೀರನ್ನು ಪೂರೈಸಲಾಗುವುದು.

ವಿಷಯ : ಸರಕಾರಿ ವಸತಿ ಗೃಹಗಳಲ್ಲಿ ವಾಸಿಸುತ್ತಿರುವ ನಿವಾಸಿಗಳ ಕೊರತೆಗಳು.

ಪ್ರಶ್ನೆ : 100(323) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹೊಂಬೇಗೌಡನಗರ ಮತ್ತು ರಾಜಾಜಿನಗರದ ವಸತಿ ಗೃಹಗಳಿಗೆ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಅಲ್ಲಿನ ನಿವಾಸಿಗಳ ಕುಂದುಕೊರತೆಗಳನ್ನು ನಿವಾರಿಸುವಲ್ಲಿ ಕಡೆಗಣಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ರಾಜಾಜಿನಗರದ ವಸತಿ ಗೃಹಗಳಿಗೆ ಕಲ್ಪಿಸಿರುವ ಸೌಲಭ್ಯಗಳನ್ನು ಹೊಂಬೇಗೌಡನಗರದ ವಸತಿ ಗೃಹಗಳಿಗೆ ಕಲ್ಪಿಸದಿರಲು ಕಾರಣಗಳೇನು ;

ಇ) ಇತ್ತೀಚೆಗೆ ರಾಜಾಜಿನಗರದ ವಸತಿ ಗೃಹಗಳಿಗೆ ಸಂಬಂಧಿಸಿದ (ಪೆಡ್‌ಲ್ಲಾಕಿನ ಹಿಂಭಾಗದಲ್ಲಿ) ದುರುದ್ದೇಶದಿಂದ ಆಟದ ಮೈದಾನವಲ್ಲದಿದ್ದರೂ, ಬೋರ್‌ವೆಲ್‌ನ ರಕ್ಷಣೆಗೆಂದು ತಂತಿ ಬೇಲಿಯನ್ನು ಅಳವಡಿಸಿದ್ದರು, ಖಾಸಗಿಯವರು, ಅತಿಕ್ರಮ ಪ್ರವೇಶ ಮಾಡಿ ವಸತಿ ಗೃಹದ ನಿವಾಸಿಗಳಿಗೆ ತೊಂದರೆ ನೀಡುತ್ತಿರುವುದರ ಬಗ್ಗೆ ದೂರಿತ್ತರು. ಯೋಗ್ಯಕ್ರಮ ತೆಗೆದುಕೊಂಡು ಬಂದೋಬಸ್ತು ಮಾಡದಿರಲು ಕಾರಣಗಳೇನು ?

ಉತ್ತರ : ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).— ಅ) ಇಲ್ಲಿ ಯಾವ ರೀತಿಯಿಂದಲೂ ಕಡೆಗಣಿಸಲಾಗುತ್ತಿಲ್ಲ.

ಆ) ರಾಜಾಜಿನಗರದಲ್ಲಿರುವ ಬಹು ಅಂತಸ್ತಿನ ಮಹಡಿಯ ನಕ್ಷೆಯೇ ಬೇರೆ, ಹೊಂಬೇಗೌಡನಗರದಲ್ಲಿ ಕಟ್ಟಿಸಿರುವ ಬಹು ಅಂತಸ್ತಿನ ನಕ್ಷೆಯೇ ಬೇರೆ. ಇಲ್ಲಿ ಸಲ್ಲಿಸಿರುವ ಕೆಲಸಗಳನ್ನು ಅಲ್ಲಿ ಸಲ್ಲಿಸುವುದಕ್ಕೆ ತಾಂತ್ರಿಕವಾಗಿ ಅನುಕೂಲಗಳಿರುವುದಿಲ್ಲ. ಆದಾಗ್ಯೂ ಸಹ ರಾಜಾಜಿನಗರದ ವಸತಿ ಗೃಹಗಳಿಗೆ ಕಲ್ಪಿಸಿರುವಂಥ ಅಗತ್ಯವಾದ ಮತ್ತು ಸಾಧ್ಯವಿರುವ ಸೌಲಭ್ಯಗಳನ್ನು ಒದಗಿಸಲು ಪರಿಶೀಲಿಸಲಾಗುವುದು.

ಇ) ಸದರಿ ನಿವಾಸಿಗಳಿಗೆ ನೀರು ಸರಬರಾಜು ಮಾಡುತ್ತಿರುವ ಕೊಳವೆ ಬಾವಿಗಳನ್ನು ಸಂರಕ್ಷಿಸುವ ಸಲುವಾಗಿ ತಂತಿ ಬೇಲಿಯನ್ನು ಹಾಕಲಾಗಿದೆ. ಅತಿಕ್ರಮಣದಿಂದ ಯಾವ ಖಾಸಗಿಯವರು ವಸತಿ ನಿವಾಸಿಗಳಿಗೆ ತೊಂದರೆ ಕೊಟ್ಟ ಸಂದರ್ಭಗಳು ಈ ಇಲಾಖೆ ಗಮನಕ್ಕೆ ಬಂದಿಲ್ಲ ಮತ್ತು ಅಲ್ಲಿಯ ನಿವಾಸಿಗಳೂ ಸಹ ಇಲಾಖೆಯ ಗಮನಕ್ಕೆ ತಂದಿಲ್ಲ, ಆದ್ದರಿಂದ ಬಂದೋಬಸ್ತು ಕ್ರಮಗಳನ್ನು ಕೈಗೊಳ್ಳುವಂತಹ ಅಗತ್ಯ ಕಂಡುಬಂದಿಲ್ಲ.